# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎ.ಸಿ. ನಂ.19/2018 ಆರ್ ಡಬ್ಲ್ಯೂ: 02

<u>ದಿನಾಂಕಃ **06-04-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಓ.ಎಲ್.ಎಂ. ವಕೀಲರಿಂದಃ</u>

ನನ್ನ ಮುಖ್ಯ ವಿಚಾರಣೆ ಕುರಿತು ಪ್ರಮಾಣಪತ್ರ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ವಿಷಯ ಸರಿ ಇರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ವಂಶವೃಕ್ಷ ಪ್ರಮಾಣಪತ್ರವನ್ನು ನಿಆರ್-1 ಎಂದು, ಕ್ರಯ ಕರಾರುಪತ್ರದ ದೃಢೀಕೃತ ನಕಲನ್ನು ನಿಆರ್-2 ಎಂದು, ವಿಲೇಜ್ ಫಾರಂ ನ ದೃಢೀಕೃತ ನಕಲನ್ನು ನಿಆರ್-3 ಎಂದು, ಮ್ಯುಟೇಷನ್ ಎಕ್ಸ್ಟ್ರಾಕ್ಟನ್ನು ನಿಆರ್-4 ಎಂದು, ಮ್ಯುಟೇಷನ್ ರಿಜಿಸ್ಟರ್ ಪ್ರತಿಯನ್ನು ನಿಆರ್-5 ಎಂದು, ಆಸ್ತಿ ಋಣಬಾರದ ಪತ್ರದ ದೃಢಿಕೃತ ನಕಲನ್ನು ನಿಆರ್-6 ರಿಂದ 8 ಎಂದು, ಅಟ್ಲಾಸ್ ನ ದೃಢೀಕೃತ ನಕಲನ್ನು ನಿಆರ್-9 ಎಂದು, 14 ಗೇಣಿ ಮತ್ತು ಪಹಣಿ ಪತ್ರಿಕೆಗಳನ್ನು ನಿಆರ್-10 ರಿಂದ 23 ಎಂದು ಗುರುತಿಸಲಾಯಿತು.

ಇನ್ನೂ ಕೆಲವು ದಾಖಲೆಗಳನ್ನು ಹಾಜರುಪಡಿಸುವುದು ಇದೆ ಎಂದು ವಕೀಲರು ಕಾಲಾವಕಾಶ ಕೋರುತ್ತಿರುವುದರಿಂದ, ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.

ಓ.ಹೆ.ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.